ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 26/09/2019

# 317 ಬ್ಯಾಂಕ್ ಖಾತೆಗಳ ತನಿಖೆ ನಡೆಯಲಿ

## ಇದು ಇನ್ನೂ ಆರಂಭದ ಹಂತ, ಜಾಮೀನು ನೀಡಲಾಗದು ಎಂದ ಕೋರ್ಟ್

**ಹೊಸದಿಲ್ಲಿ:** ಡಿ.ಕೆ.ಶಿವಕುಮಾರ್ ಅವರು ಎದುರಿಸುತ್ತಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ(ಇ.ಡಿ) ನಡೆಸುತ್ತಿರುವ ತನಿಖೆಯು ಇನ್ನೂ ಆರಂಭಿಕವಾಗಿದ್ದು, ಅತ್ಯಂತ ಮಹತ್ವದ ಹಂತದಲ್ಲಿದೆ. ಹೀಗೆ ಶಿವಕುಮಾರ್ ಅವರು ಪ್ರಭಾವಿಯಾಗಿದ್ದು, ಸಾಕ್ಷಿಗಳ ಮೇಲೆ ಪ್ರಭಾವ ಬೀರಬಹುದು. ದಾಖಲೆಗಳನ್ನು ತಿದ್ದಬಹುದು. ಹಾಗಾಗಿ ತನಿಖೆಯ ಈ ಹಂತದಲ್ಲಿ ಜಾಮೀನು ನೀಡಲಾಗದು ಎಂದು ದಿಲ್ಲಿಯ ವಿಶೇಷ ನ್ಯಾಯಾಲಯ ಬುಧವಾರ ಹೇಳಿದೆ.




ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಡಿಕೆಶಿ ಅವರಿಗೆ ಸೆ.17ರಂದು 14 ದಿನಗಳ ನ್ಯಾಯಾಂಗಬಂಧನ ವಿಧಿಸಲಾಗಿತ್ತು. ಸೆ.21ರಂದು ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ತೀರ್ಪನ್ನು ಸೆ.25ಕ್ಕೆ ಕಾಯ್ದಿರಿಸಿತ್ತು. ಬುಧವಾರ ವಿಶೇಷ ನ್ಯಾಯಾಧೀಶ ಅಜಯ್ ಕುಮಾರ್ ಕುಹಾರ್ ಅವರು ಜಾಮೀನು ನೀಡಲು ನಿರಾಕರಿಸಿದರು.

### ವೈದ್ಯಕೀಯ ನೆರವು ನೀಡಿ

ಆಂಜಿಯೋಪ್ಲಾಸ್ಟಿಗೆ ಒಳಗಾಗಿರುವ ಶಿವಕುಮಾರ್ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಮತ್ತು ಔಷಧಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದ ಕೋರ್ಟ್, ಅವರಿಗೆ ಎಲ್ಲ ವೈದ್ಯಕೀಯ ನೆರವು ನೀಡಲು ಜೈಲ್ ಸೂಪರಿಂಟೆಂಡೆಂಟ್‌ಗೆ ಸೂಚನೆ ನೀಡಿತು. ಒಂದೊಮ್ಮೆ ಅಗತ್ಯಬಿದ್ದರೆ ತಕ್ಷಣ ರಾಮ್ ಮನೋಹರ್ ಲೋಹಿಯಾ ಇಲ್ಲವೇ ಏಮ್ಸ್ ಆಸ್ಪತ್ರೆಗೆ ಸೇರಿಸಲು ಸೂಚಿಸಿತು.

"ಇ.ಡಿ.ಯು ಡಿಕೆಶಿ ಅವರು ಹೊಂದಿರುವ 317 ಖಾತೆಗಳು ಮತ್ತು ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಯನ್ನು ತೋರಿಸಿದೆ. ಈ ದಾಖಲೆಗಳ ಪರಿಶೀಲನೆ ಮತ್ತು ಆರೋಪಿಗೂ ಆಸ್ತಿಗೂ ಇರುವ ಸಂಬಂಧದ ಪರಿಶೀಲನೆ ಅತ್ಯಂತ ಮಹತ್ವದ ಹಂತದಲ್ಲಿದೆ," ಎಂದು ನ್ಯಾಯಾಧೀಶರೇ ಹೇಳಿದರು. ಆರೋಪಿಯು ಪ್ರಭಾವಿಯಾಗಿರುವುದರಿಂದ ದಾಖಲೆಗಳನ್ನು ತಿದ್ದುವ, ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಮೊದಲು ತನಿಖೆ ಪೂರ್ಣಗೊಳ್ಳಲಿ ಎಂದರು.

### ಕೋರ್ಟ್ ಖಡಾಖಡಿ ಮಾತು

- ಜಾಮೀನು ಅರ್ಜಿಯನ್ನು ಪರಿಗಣಿಸುವಾಗ ವ್ಯಕ್ತಿಯ ಸ್ವಾತಂತ್ರ್ಯದ ಪ್ರಶ್ನೆ ಇರಬೇಕು. ಹಾಗಂತ, ಸಮಾಜದ ಹಿತಾಸಕ್ತಿಯನ್ನು ನಿರ್ಲಕ್ಷಿಸುವಂತಿಲ್ಲ.
- ಅನಾರೋಗ್ಯವೊಂದನ್ನೇ ಆಧಾರವಾಗಿಟ್ಟುಕೊಂಡು ಜಾಮೀನು ನೀಡಲು ಸಾಧ್ಯವಿಲ್ಲ.

"ತನಿಖಾ ಸಂಸ್ಥೆಯು ತನ್ನ ಕೆಲಸವನ್ನು ಪೂರ್ಣವಾಗಿ ಮತ್ತು ಮುಕ್ತವಾಗಿ ನಡೆಸುವಂತಿರಬೇಕು, ಅದು ತಾರ್ಕಿಕ ಅಂತ್ಯಕ್ಕೆ ಸಾಗಬೇಕು. ಮಹತ್ವದ ಹಂತದಲ್ಲಿ ಆರೋಪಿಗೆ ಜಾಮೀನು ನೀಡುವುದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ," ಎಂದು ಕುಹಾರ್ ಹೇಳಿದರು. ಇ.ಡಿ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್, ಶಿವಕುಮಾರ್ ಪರವಾಗಿ ಹಿರಿಯ ವಕೀಲರಾದ ಅಭಿಷೇಕ್ ಮನುಸಿಂಘ್ವಿ, ಮುಕುಲ್ ರೋಹಟ್ಗಿ ಮತ್ತು ದಯಾ ಕೃಷ್ಣನ್ ವಾದಿಸಿದ್ದರು.



...Estate Ltd. No.9/10/11-A, 4th Main, Bommasandra Industrial Area, Hosur Road ... RNI No.71653/99